# ಪ್ರೇಮ ಕಾವ್ಯಯಾನ

ಗಜಲ್ ಮೂಲತಃ ಅರಬ್ಬಿ ಕಾವ್ಯ ಪ್ರಕಾರವಾದರೂ ಅದು ಉರ್ದು ಮತ್ತು ಫಾರಸಿ ಭಾಷೆಗಳಲ್ಲಿಯೂ ಕಾವ್ಯ ಪ್ರಕಾರದ ಹಣೆಮಣಿಯಂತೆ ಚಮಕಿಸಿದೆ. ಕನ್ನಡದಲ್ಲಿ ರಾಯಚೂರಿನ ಕವಿ ಶಾಂತರಸರಿಂದ ಮೊದಲಡಿಯಿಟ್ಟ ಇದು ಇತ್ತೀಚೆಗೆ ವೈವಿಧ್ಯಪೂರ್ಣವಾಗಿ ಅವತರಿಸಿ ಕಾವ್ಯಾಸಕ್ತರ ಹುಬ್ಬೇರಿಸುವಂತೆ ಮಾಡುತ್ತಿದೆ. ಗಜಲ್‌ಗಳಿಗಾಗಿಯೇ ಸಮ್ಮೇಳನ ನಡೆಯುವ ಮಟ್ಟಕ್ಕೂ ಕನ್ನಡದಲ್ಲಿ ಅದು ಮೈತಳೆಯುತ್ತಿದೆ. ಕನ್ನಡಿಗರನ್ನು ಅದು ಈ ಪರಿ ಮನಮೋಹಕಗೊಳಿಸಲು ಇರುವ ಪ್ರೇರಣೆ ಮತ್ತು ಧೋರಣೆಗಳ ಕುರಿತು ಅಕಾಡೆಮಿಕ್ ನಿಷ್ಕರ್ಷೆ ಆಗಬೇಕಿದೆ. ಹೀಗಿರುವಾಗಲೂ ಕನ್ನಡದಲ್ಲಿ ಗಜಲ್ ಇನ್ನೂ ತನ್ನ ಪಕ್ವ ಸ್ಥಿತಿಗೆ ಮುಟ್ಟಿಲ್ಲವೆಂದೆ ತೋರುತ್ತದೆ.

'ಗಜಲ್' ಸೂಫಿ ಪ್ರೇಮಕಾವ್ಯದ ಸಶಕ್ತ ವಾಹಕ. ಸೂಫಿತ್ವ ಎಂದರೆ ಅದು ಪ್ರೇಮತ್ವವೆ ಹೌದು. ಉರ್ದುವಿನಲ್ಲಿ ಇಷ್ಕ್, ಮೊಹಬ್ಬತ್, ಪ್ಯಾರ್, ಯಾರಾನಾ ಎಂದೆಲ್ಲ ಕರೆಸಿಕೊಳ್ಳುವ ಅದು ಕನ್ನಡದ ಒಲವು, ಪ್ರೀತಿ, ಪ್ರೇಮ, ಪ್ರಣಯ ಎಂದೂ ಬಿಂಬಿತವಾಗುತ್ತದೆ. ಮನುಷ್ಯರ ಬದುಕಿನಲ್ಲಿ ಪ್ರೇಮ ಭಾವದಷ್ಟು ಗಟ್ಟಿಯಾದ, ಆಪ್ತವಾದ, ಅನಿವಾರ್ಯವೂ ಆದ ಭಾವ ಇನ್ನೊಂದು ಇರಲಿಕ್ಕಿಲ್ಲ. ಜಗತ್ತಿನ ಎಲ್ಲ ಸಾಹಿತ್ಯ ಪರಿಗಣಿಸಿದರೂ ಪ್ರೇಮಕಾವ್ಯದ್ದೇ ಸಿಂಹಪಾಲು. ಪ್ರೇಮವೊಂದಿರದಿದ್ದರೆ ಮನುಷ್ಯ ಪ್ರಪಂಚ ಇಷ್ಟೊಂದು ಆಕರ್ಷಕವೂ ಆರ್ದ್ರವೂ ಆಗುತ್ತಿರಲಿಲ್ಲವೆಂದು ತೋರುತ್ತದೆ. ಅದನ್ನೆ ಕನ್ನಡದ ರಸಿಕ ಕವಿ ನೇಮಿಚಂದ್ರನು 'ಸ್ತ್ರೀ ರೂಪಮೇ ರೂಪಂ ಶೃಂಗಾರಮೆ ರಸಂ' ಎಂದಿದ್ದಾನೆ. ಸ್ತ್ರೀರೂಪದ ಪರಿಭಾಷೆಯೆ ಇಂದು ಬದಲಾಗಿದೆಯಾದರೂ ಶೃಂಗಾರ ಭಾವ ಕುರಿತು ಅದೇ ಟೆಂಪರ್ ಇದೆಯಲ್ಲವೆ? ಶೃಂಗಾರ ರಸಕ್ಕೆ ಸ್ಥಾಯಿಯಾದ ರತಿಯಷ್ಟು (ಪ್ರೇಮ) ಪ್ರಚಂಡವಾದ ಭಾವ ಇನ್ನೊಂದು ಇರಲಾರದು ಎನ್ನುತ್ತಾನೆ ಕವಿ. ಇಂಥ ಪ್ರೇಮ ಭಾವವೊಂದನ್ನು ಪೂರ್ಣ ತತ್ವವಾಗಿಸಿದ ಕೀರ್ತಿ ಸೂಫಿ ಸಂತರಿಗೆ ಸಲ್ಲುತ್ತದೆ. ಸೂಫಿಗಳು ಗಜಲ್ ಎಂಬ ಕಾವ್ಯ ಪ್ರಕಾರದಲ್ಲಿ ಮೊಹಬ್ಬತ್‌ನ್ನು ಭಟ್ಟಿ ಇಳಿಸಿದಂತೂ 'ಲಾ ಜವಾಬ್' ಅಂದರೆ ಮಾತಿಗೆ ಮೀರಿದ್ದು ಅಂತ.

ಲೌಕಿಕವೋ ಅಲೌಕಿಕವೋ ಪ್ರೇಮದ ಪರಾಕಾಷ್ಠೆಯನ್ನು ಅರಿಯಬೇಕಾದರೆ ಉರ್ದು ಗಜಲ್ ಲೋಕಕ್ಕೆ ಲಗ್ಗೆ ಹಾಕಬೇಕು. ಉರ್ದುವಿನ ಕವಿ ಮೊಹಸಿನ್ ಭೋಪಾಲಿ ಬರೆದ ಗಜಲೊಂದರ ತುಣುಕೇ ಸಾಕು.

ಚಾಹತ್ ಮೇ ಕ್ಯಾ ದುನಿಯಾದಾರಿ \ ಇಷ್ಕ್ ಮೇ ಕೈಸೀ ಮಜಬೂರಿ|

ಲೋಗೋ ಕೋ ಕ್ಯಾ ಸಮಝಾನೇ ದೋ ಉನ್ ಕೀ ಅಪನೀ ಮಜಬೂರಿ|

(ಒಲುಮೆಯಲ್ಲಿ ಏಕೆ ಲೋಕದ ಚೌಕಾಶಿ\ ಪ್ರೇಮದಲ್ಲಿ ಅದೇಕೆ ಅಸಹಾಯಕತೆ\ ಜನರೇನೆ ತಿಳಿಯಲಿ ಇರಬೇಕು ಅವರಿಗೂ ಏನೋ ಅಸಹಾಯಕತೆ)

ಲೋಕಪ್ರಸಿದ್ಧ ಗಜಲ್ ಗಾಯಕಿ ಮುನ್ನಿ ಬೇಗಂಳ ಧ್ವನಿಯಲ್ಲಿ ಇದನ್ನು ಕೇಳುವುದೇ ಅನ್ಯೋನ್ಯ ಅನುಭವ. ಅದೊಂದು ಅತೀತದೊಂದಿಗಿನ ಪಯಣ. ತನ್ನೊಳಗಿನ ತಾನು ಅರಿಯುವ ಮಾರ್ಗವದು. ಹೌದು ಒಲುಮೆಯಲ್ಲಿ ಲೋಕ ದಂದುಗದ ಲೆಕ್ಕಾಚಾರ ಇಲ್ಲ. ಪ್ರೇಮದಲ್ಲಿ ಅಸಹಾಯಕತೆ ಇರುವುದಿಲ್ಲ. ಪ್ರೇಮಿಗಳಿಗೆ ಲೋಕದ ಜಾತಿ, ಧರ್ಮ, ಪ್ರದೇಶ, ಭಾಷೆ, ಅಂತಸ್ತು ಯಾವುವು ಅಡ್ಡಿಯಾಗಲಾರವು. ಸಾಮಾಜಿಕರಿಗೆ ಮಾತ್ರ ಪ್ರೇಮ ಮತ್ತು ಪ್ರೇಮಿಗಳ ನಡೆ ಇವೆರಡೂ ಆತಂಕ ಮತ್ತು ಅವ್ಯಕ್ತ ಭಯವನ್ನು ಹುಟ್ಟಿಸುತ್ತವೆ. ಸೃಷ್ಟಿಯಲ್ಲಿ ಇಲ್ಲದೆ ಇರುವ ಆದರೆ ಸಮಾಜದಲ್ಲಿ ಸತ್ಯಶಃ ಸತ್ಯವಾಗಿ ಆಚರಿಸಲ್ಪಡುವ ಈ ಎಲ್ಲ ಕೊಳೆ ಕಸಗಳು ಪ್ರೇಮವನ್ನು ಸಹಿಸುವುದಿಲ್ಲ. ಅಂತೆಯೇ ಜಾತಿ, ಪಂಥಗಳ ಕೊಚ್ಚೆಯಲ್ಲಿ ಬಿದ್ದು ಒದ್ದಾಡುತ್ತಿರುವ ಮತಾಂಧರು ಪ್ರೇಮಿಗಳನ್ನ ಹತ್ಯೆಗೈಯುತ್ತಾರೆ. ಅವರು ಪ್ರೇಮಿಗಳನ್ನು ಕಡಿದು ಹಾಕಬಲ್ಲರು. ಆದರೆ ಪ್ರೇಮವನ್ನೆಂದೂ ಕೊಲ್ಲಲಾಗದು. ಅದು ನಿರಾಕಾರ, ನಿರ್ವಿಕಲ್ಪ, ನಿರಾಮಯ. ನಿರಂಜನವಾದರೂ ಅದು ಮನುಷ್ಯರಲ್ಲಿ ಭಾವವಾಗಿ ಆವಿರ್ಭವಿಸುತ್ತದೆ. ಸೃಷ್ಟಿಯ ಅದ್ಭುತ ಲೀಲಾವಿನೋದ. ಶಿವ–ಶಕ್ತಿಯ ಸಂಗಮ. ದುರಂತವೆಂದರೆ ಮನುಷ್ಯರು ಅನವಶ್ಯವಾಗಿ ಕಲ್ಪಿಸಿಕೊಂಡಿರುವ ನೂರಾರು ಗೋಡೆಗಳಿಂದಾಗಿ ಸ್ವಚ್ಛಂದವಾಗಿ ಬರಮಾಡಿಕೊಳ್ಳಬೇಕಿದ್ದ ಭಾವ ಬಯಕೆಗಳನ್ನು ವಿಕೃತ ವಿಕಾರಗೊಳಿಸಿ ಕ್ರೌರ್ಯ ಮೆರೆಯುತ್ತಾರೆ. ಸುಂದರಾನುಭಾವ ಆಗಿ ಅರಳಿ ಪರಿಮಳಿಸಬೇಕಿದ್ದ ಪ್ರೇಮ ಪುಷ್ಪವನ್ನು ಹೊಸಕಿ, ಹಿಸುಕಿ, ವಿಚ್ಛಿದ್ರಗೊಳಿಸಲಾಗುತ್ತದೆ. ಅದ್ಭುತವೆಂದರೆ ಪ್ರೇಮ ಪರ್ವಕ್ಕೆ ಇವು ಯಾವುಗಳ ಭಯ, ಹಂಗೂ ಇರುವುದಿಲ್ಲ. ಕಾರಣ ಅದನ್ನು ತಡೆಯಲಾಗದು ಎಂಬುದನ್ನು ಮೊಹಸಿನ್

ರೋಕ್ ಸಕೇ ತೋ ಪಹೆಲಿ ಬಾರಿಶ ಕೀ ಬೂಂದೋ ಕೋ ತುಮ್ ರೋಕೊ|

ಕಚ್ಚಿ ಮಿಟ್ಟೀ ತೋ ಮೆಹೆಕೆಗಿ | ಹೈ ಮಿಟ್ಟೀ ಕೀ ಮಜಬೂರಿ||

(ತಡೆಯುವುದಾದರೆ ಮೊದಲ ಮಳೆಹನಿಯನ್ನು ನೀ ತಡೆ| ಮಳೆಯುಂಡ ಮಣ್ಣು ಘಮಲಿಸದೇ ಇದ್ದಾತೆ| ಅದು ಮಣ್ಣಿನ ಅನಿವಾರ್ಯತೆ) ವಾಹ್ವ್ 'ಲಾ ಜವಾಬ್' ಅಂದರೆ ಮಾತಿಗೆ ಮೀರಿದ್ದು ಅಂತ. ಮೊದಲ ಮಳೆ ಹನಿಗೂ ಉತ್ಕಟವಾಗಿರುವ ಪ್ರೇಮಕ್ಕೂ ಅದೆಂಥ ಸಾಮ್ಯ. ಮೊದಲ ಮೋಡಕ್ಕೆ ಹನಿಯೊಡೆದ ನೀರು ನೆಲಕ್ಕೆ ಬಿದ್ದೊಡನೆ ಸಾಕು. ಬಿಸಿಲಿಗೆ ಕೆಂಪೇರಿ ಕಾದ ಮಣ್ಣು ತನ್ನ ಅಭಿಜಾತ ಸುವಾಸನೆ ಬೀರದೆ ಇರದು. ಮೊದಲ ಮಳೆಹನಿಯುಂಡ ಮಣ್ಣಿನ ಖಮ್ಮನೆ ಘಮಲನ್ನು ಆಘ್ರಾಣಿಸದ ನಾಸಿಕವೆ ಇಲ್ಲ. ಮಳೆಹನಿಯಿಂದ ಪುಲಕಿತಗೊಂಡ ಮಣ್ಣಿಗೆ ವಾಸನೆ ಬೀರದಿರು ಎನ್ನಲಾದಿತೆ? ಮಣ್ಣನ್ನು ವಾಸನೆಯಿಂದ ಹೇಗೆ ಬೇರ್ಪಡಿಸಲಾಗದೋ ಅಂತೆ ಹೃದಯದಿಂದ ಪ್ರೇಮವನ್ನು ಉಚ್ಚಾಟಿಸಲಾಗದು.

ಏಕ್ ಆವಾರಾ ಬಾದಲ್ ಸೇ ಕ್ಯೂಂ ಮೈನೇ ಸಾಯಾ ಮಾಂಗಾ ಥಾ|

ಮೇರಿ ಭೀ ಏ ನಾದಾನೀ ಥೀ| ಉಸಕೀ ಭೀ ಥೀ ಮಜಬೂರಿ|

(ಚಂಚಲವಾದ ಮೋಡದಿಂದ ನಾನೇಕೆ ನೆರಳು ಬೇಡಿದೆ| ನನ್ನದೂ ಹುಚ್ಚಾಟವಿದ್ದರೆ ಅದರದು ದೌರ್ಬಲ್ಯವಿತ್ತಲ್ಲ) ಪ್ರೇಮಿ ಹೇಳುತ್ತಾಳೆನೆ ಮೋಡ ಚಂಚಲ, ಕ್ಷಣಿಕ ಎಂದು ಗೊತ್ತಿದ್ದರೂ ನಾನು ಅದರಿಂದ ನೆರಳು ಆಶಿಸಿದೆ. ಅದಕ್ಕೂ ನನ್ನ ಹುಚ್ಚಾಟದ ಗುಂಗು ಇತ್ತು. ಪ್ರೇಮವೇ ಹಾಗೇ ಅದಕ್ಕೆ ತುಂಟಾಟ, ಕಚ್ಚಾಟ ಎಲ್ಲಕ್ಕಿಂತ ಹೆಚ್ಚಾಗಿ ರಿಸ್ಕ್ ಬೇಕು. ಅಪಾಯ ಎಳೆದುಕೊಳ್ಳುವುದು ಪ್ರೇಮವಾದರೂ ಬಲಿಯಾಗುವವರು ಮಾತ್ರ ಪ್ರೇಮಿಗಳು. ಅದೊಂದು ಸಿಹಿ ಯಾತನೆ. ಮಾಯಾವೀ ಪ್ರೇಮದಿಂದ ತಪ್ಪಿಸಿಕೊಂಡವರುಂಟೆ? ಎನ್ನುತ್ತಾನೆ ಕವಿ.

■ **ಮೀನಾಕ್ಷಿ ಬಾಳಿ**

## ಮಾತೇ ಮುತ್ತು

- ಎಂತಹ ಕಟು ಅನುಭವ ಪ್ರಸಂಗ ಬಂದರೂ ಎದೆಗುಂದಬಾರದು. ಇದೇ ಸುಖಿ ಆಗಿರೋ ರಹಸ್ಯ.

  —ದ.ರಾ. ಬೇಂದ್ರೆ

- ಇನ್ನೊಬ್ಬನ ಹುಚ್ಚುತನ ನಮಗೆ ಕಾಣಿಸುವಷ್ಟು ಸುಲಭವಾಗಿ, ನಮ್ಮದೇ ಹುಚ್ಚುತನ ನಮಗೆ ಕಾಣಿಸುತ್ತದೆಯೇ?

  —ಶಿವರಾಮ ಕಾರಂತ

- ಮಾನವ ಭೂಮಿಯ ಮೇಲೆ ಇದ್ದುಕೊಂಡು ಸ್ವರ್ಗವನ್ನು ಗೆಲ್ಲುವ ಸಾಧನೆ ಮಾಡಬೇಕು.

  —ವಿನಾಯಕಕೃಷ್ಣ ಗೋಕಾಕ

- ಜ್ಞಾನಕ್ಕೆ ವಿದ್ಯೆಯೂ, ವಿದ್ಯೆಗೆ ಓದು ಬರಹವೂ ತಳಹದಿ.

  —ಬಿ.ಎಂ. ಶ್ರೀಕಂಠಯ್ಯ

- ಜನಾಂಗವನ್ನು ಶ್ರೇಷ್ಠ ಮಾಡುವುದಕ್ಕೆ ಒಂದೇ ದಾರಿ. ಜನರನ್ನು ಶ್ರೇಷ್ಠ ಮಾಡಬೇಕು.

  —ಎಂ. ವಿಶ್ವೇಶ್ವರಯ್ಯ

- ಸತ್ಯ ದರ್ಶನವಾಗಬೇಕು ಎಂದರೆ ಅಹಂಕಾರ ವಿಸರ್ಜನೆಯಾಗಬೇಕು.

  —ತ.ರಾ. ಸುಬ್ಬರಾವ್

- ತಾಯಿ ಇಲ್ಲದ ತವರಿಗೆ ಮಗಳು ಬಂದರೆ ಉರಿಬೇಸಗೆಯಲ್ಲಿ ಮರಳು ಗಾಡಿಗೆ ಬಂದಂತೆ.

  —ಅನಕೃ

- ನಾಗರಿಕತೆ ಸಾಮಾಜಿಕ ವ್ಯವಸ್ಥೆ. ಸಂಸ್ಕೃತಿ ಆಧ್ಯಾತ್ಮಿಕ ಪ್ರಕೃತಿ.

  —ಎಸ್. ಶ್ರೀಕಂಠಶಾಸ್ತ್ರಿ